ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಶುಕ್ರವಾರ, ದಿನಾಂಕ : 26ನೇ ಜುಲೈ, 2019

ಮಾಹಿತಿ ತಂತ್ರಜ್ಞಾನ ಕ್ಷೇತ್ರದಿಂದ ಬೆಂಗಳೂರಿನಲ್ಲಿ ಜನದಟ್ಟಣೆ ಹಾಗೂ ಇನ್ನಿತರೆ ಸಮಸ್ಯೆಗಳ ಬಗ್ಗೆ

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

624 (749) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಾಹಿತಿ ತಂತ್ರಜ್ಞಾನವು ಬೆಂಗಳೂರಿನಲ್ಲಿಯೇ ಕೇಂದ್ರೀಕೃತವಾಗಿದ್ದು, ಇದರಿಂದ ಜನದಟ್ಟಣಿ ಹೆಚ್ಚಾಗಿದ್ದು ನೀರು, ವಿದ್ಯುತ್ ವಾಹನ ದಟ್ಟಣೆ ಹಾಗೂ ಇನ್ನಿತರೆ ಸಮಸ್ಯೆಗಳು ಉಲ್ಬಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದ ಉತ್ತರ ಭಾಗದಲ್ಲಿ ಈ ತಂತ್ರಜ್ಞಾನದ ಪಾರ್ಕ್‌ಗಳನ್ನು ಸ್ಥಾಪಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಸರ್ಕಾರದ ನಿಲುವೇನು ;

(ಇ) ಈ ತಂತ್ರಜ್ಞಾನದ ಉದ್ಯೋಗವನ್ನು ರಾಜ್ಯದ ಉತ್ತರ ಭಾಗದ ಉತ್ತೇಜಕವಾದ ಜಿಲ್ಲೆಗಳಿಗೆ ವಿಕೇಂದ್ರಿಕರಿಸುವುದರಿಂದ ಬೆಂಗಳೂರಿಗೆ ಒತ್ತಡ ಕಡಿಮೆಯಾಗುವುದರೊಂದಿಗೆ ರಾಜ್ಯದ ಇತರ ಭಾಗಗಳ ಸಮತೋಲನ ಬೆಳವಣಿಗೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ;

(ಈ) ಇಂತಹದ ವಿಕೇಂದ್ರಿಕರಣದಿಂದ ರಾಜ್ಯದ ಹಿಂದುಳಿದ ಭಾಗವನ್ನು ಅಭಿವೃದ್ಧಿಪಡಿಸುವುದರೊಂದಿಗೆ, ಸ್ಥಳೀಯ ಜನರಿಗೆ ಉದ್ಯೋಗದ ಅವಕಾಶ ದೊರಕಿಸುವುದರೊಂದಿಗೆ ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ ;

(ಉ) ಹಾಗಿದ್ದಲ್ಲಿ, ಇದರ ರೂಪುರೇಷೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದು ?